## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

ಸಿಸಿ.ನಂಃ 1564/2022

ಪಿರ್ಯಾದುದಾರರು : ಭಟ್ಕಳ ಶಹರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿತ : ಕೆ.ಪಿ. ಮುಸ್ತಪಾ ತಂದೆ ಅಬ್ದುಲ್ಲಾ

## ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿಯ ಹೇಳಿಕೆಃ–

ಪ್ರಶ್ನೆ–1 : ಈ ಪ್ರಕರಣದಲ್ಲಿ ಅಭಿಯೋಜನೆಯವರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ : Yes

ಪ್ರಶ್ನೆ–2 : ಫ್ರಾಸಾ–1 ಖತೀಜಾ ಸಫ್ರೀನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12.11.2021 ರಂದು ರಾತ್ರಿ ರಂಗಿನಕಟ್ಟೆಯಲ್ಲಿರುವ ತಮ್ಮ ಮನೆಯಲ್ಲಿ ಕಳ್ಳತನವಾಗಿತ್ತು. ಆ ಸಮಯದಲ್ಲಿ ತನ್ನ ಸಹೋದರನು ತೀರಿಕೊಂಡಿದ್ದುದ್ದರಿಂದ ತಾನು ತನ್ನ ತಾಯಿ ಮನೆಯಲ್ಲಿದ್ದೆನು. ದಿನಾಂಕ 13.11.2021 ರಂದು ತಾನು ತನ್ನ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಲುವಾಗಿ ಮನೆಗೆ ಬಂದಾಗ ಕಳುವಾದ ಬಗ್ಗೆ ಗೊತ್ತಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ : False

ಪ್ರಶ್ನೆ–3 : ಫ್ರಾಸಾ–1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ತಮ್ಮ ಮನೆಯ ಮುಖ್ಯ ಬಾಗಿಲನ್ನು ತೆಗೆದು, ಮಲಗುವ ಕೋಣೆಯಲ್ಲಿರುವ ಅಲ್ಮೇರಾದಲ್ಲಿನ ತನ್ನ ಒಂದು ಬೇಸ್ಲೆಟ್, ಕಿವಿ ಓಲೆ ಒಂದು ಜೊತೆ, 2 ಉಂಗುರಗಳನ್ನು ಕಳುವು ಮಾಡಿರುತ್ತಾರೆ. ಸದ್ರಿಯದರ ಒಟ್ಟು ಕಿಮ್ಮತ್ತು 1,65,000/– ರೂ. ಮೌಲ್ಯದಾಗಿದ್ದವು. ನಂತರ ತಾನು ಪೊಲೀಸ್ ಠಾಣೆಗೆ ಹೋಗಿ ವಿಷಯವನ್ನು ತಿಳಿಸಿರುತ್ತೇನೆ. ನಂತರ 12.30 ಗಂಟೆ ಸುಮಾರಿಗೆ ಸ್ಥಳಕ್ಕೆ ಶ್ವಾನದಳದವರು ಬಂದಿರುತ್ತಾರೆ. ಶ್ವಾನದಳದವರು ಬಂದು ಮನೆಯನ್ನು ಪರಿಶೀಲಿಸಿ ಪೊಲೀಸರು ಪಂಚನಾಮೆಯನ್ನು ಜರುಗಿಸಿದ ನಂತರ ತಾನು ಮರಳಿ ಠಾಣೆಗೆ

ಹೋಗಿ ದೂರನ್ನು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-4 : ಫ್ರಾಸಾ- 1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಪಂಚನಾಮೆಯ ಮೇಲೆ ತನ್ನ ಸಹಿ ಹಾಕಿರುತ್ತೇನೆ. ಪಂಚನಾಮೆ ಕಾಲಕ್ಕೆ ಪೊಲೀಸರು ಸ್ಥಳದ ಪೋಟೋಗಳನ್ನು ತೆಗೆದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಚಾಸಾ.2 ಮತ್ತು 3 ರವರು ಉಪಸ್ಥಿತರಿದ್ದರು. ನಂತರ ಪೊಲೀಸರು ನಿಮ್ಮನ್ನು ಪೊಲೀಸ್ ಠಾಣೆಗೆ ಕರೆದು ತಂದಿದ್ದರು. ಪೊಲೀಸರು ನಿಮ್ಮ ಬಳಿಯಿಂದ ಕಳುವಾದ ಬಂಗಾರದ ಆಭರಣಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-5 : ಫ್ರಾಸಾ-2 ಮೊಹಮದ್ ಇಸ್ಮಾಯಿಲ್ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 13.11.2021 ರಂದು ರೈಸ್ ಮಿಲ್ಲಿನ ಹಿಂದುಗಡೆ ಇರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಆಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-6 : ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ತನ್ನನ್ನು ಅಲ್ಲಿಗೆ ಪಂಚನಾಮೆಗೆಂದು ಪೊಲೀಸರು ಕರೆಸಿದ್ದರು. ತನ್ನ ಸಮಕ್ಷಮ ಶ್ವಾನ ದಳದವರು ನಾಯಿಯನ್ನು ಮನೆಯಲ್ಲಿ ತಿರುಗಾಡಿಸಿ ಪರೀಕ್ಷಿಸಿರುತ್ತಾರೆ. ತನ್ನೊಂದಿಗೆ ಚಾಸಾ-1 ಮತ್ತು 2 ರವರು ಇದ್ದರು. ಶ್ವಾನ ದಳದವರು ಸ್ದಳದಲ್ಲಿ 10.30 ರಿಂದ 12.30 ರವರೆಗೆ ಇದ್ದರು. ಪಂಚನಾಮೆಯ ಮೇಲೆ ತನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-7 : ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಅದಾದ ನಂತರ ತಮ್ಮನ್ನು ಪೊಲೀಸ ಠಾಣೆಗೆ ಕರೆಯಿಸಿ ಆಭರಣಗಳನ್ನು ತೋರಿಸಿ ಅಲ್ಲಿ ಒಂದು ದಾಖಲಾತಿಯ ಮೇಲೆ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿಯೂ ಸಹ ಚಾಸಾ-1 ಮತ್ತು 2 ರವರು ಉಪಸ್ದಿತರಿದ್ದರು. ಸದ್ರಿ ಆಭರಣಗಳನ್ನು ಪೊಲೀಸರು ತನಗೆ 2.30 ಗಂಟೆಯಿಂದ 3.30 ಗಂಟೆಯ ನಡುವಿನ ಅವಧಿಯಲ್ಲಿ ತೋರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-8 : ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಅದಾದ ನಂತರ ಆರೋಪಿತರು ರಾಡ್ ನಿಂದ ಮನೆಯ ಬಾಗಿಲನ್ನು ಒಡೆದು ಮಿನಿ ವಿಧಾನ ಸೌದದ ಬಳಿ ಎಸೆದದನ್ನು ತೋರಿಸಲು ಮತ್ತು ಅದರ ಪಂಚನಾಮೆ ಜರುಗಿಸಲು ಕರೆದುಕೊಂಡು ಹೋಗಿದ್ದರು. ತನ್ನೊಂದಿಗೆ ಚಾಸಾ-2 ರವರು ಮತ್ತು ಪೊಲೀಸರು ಇದ್ದು ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು 5.00-5.45 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-9 : ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಅದಾದ ನಂತರ ಚಾಸಾ-1 ರವರ ಮನೆಗೆ ಕರೆದುಕೊಂಡು ಆರೋಪಿತನಾದ ನೀವು ಏನೆನ್ನು ಒಡೆದಿರುತ್ತೀರಿ ಎಂದು ತೋರಿಸಿರುತ್ತಾರೆ. ಪೋಲಿಸರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು 6.30-7.30 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-10 : ಫ್ರಾಸಾ-3 ಮೊಹಮದ್ ಸಮೀರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 13.11.2021 ರಂದು ತನ್ನ ಹೆಂಡತಿಯ ತಂಗಿಯಾದ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಆಗಿತ್ತು. ಚಾಸಾ-1 ರವರ ಮನೆಯು ರಂಗಿನಕಟ್ಟಾ ಹಿಂದೆ ಇರುವ ಮಿಲ್ಲಿನ ಬಳಿ ಸಲ್ಮಾನಾ ಬಾದದಲ್ಲಿರುತ್ತದೆ. ಆ ದಿನ ರಾತ್ರಿ ಕಳ್ಳತನ ಆಗಿದ್ದು ಚಾಸಾ-1 ರವರು ತಮ್ಮ ಮನೆಯಿಂದ ಬೆಳಿಗ್ಗೆ ಅವರ ಮನೆಗೆ ಹೋಗಿ ನೋಡಿದಾಗ ಕಳ್ಳತನ ಆದ ವಿಷಯ ಅವರಿಗೆ ತಿಳಿದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-11 : ಫ್ರಾಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಚಾಸಾ-1 ರವರ ಮನೆಯಿಂದ ಒಂದು ಬ್ರೆಸಲೇಟ್, 2 ಉಂಗುರಗಳು, 1 ಜೊತೆ ಕಿವಿಯೋಲೆಗಳು ಕಳ್ಳತನವಾಗಿರುತ್ತವೆ. ಒಟ್ಟು ಒಂದು ಲಕ್ಷ ಐವತ್ತು ಸಾವಿರ ರೂ. ಮೌಲ್ಯದ ಚಿನ್ನಾಭರಣ ಕಳ್ಳತನ ಆಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-12 : ಫ್ರಾಸಾ-4 ಪ್ರವೀಣ ರವರು ತಮ್ಮ ಸಾಕ್ಷ್ಯದಲ್ಲಿ, 2021 ನೇ ಇಸವಿಯಲ್ಲಿ ಭಟ್ಕಳ ಶಹರ ಪೊಲೀಸ್ ಠಾಣೆಯ ಪೊಲೀಸರು ಠಾಣೆಗೆ ಕರೆದು ಚಿನ್ನ ತೂಕ ಮಾಡಲು ಹೇಳಿರುತ್ತಾರೆ. ಹಾಗೆ ತಾನು ಠಾಣೆಗೆ ಹೋಗಿ ಎರಡು ಚಿನ್ನದ ಉಂಗುರ, ಒಂದು ಚಿನ್ನದ ಬ್ರೆಸ್ ಲೇಟ್, ಒಂದು ಜೊತೆ ಚಿನ್ನದ ಕಿವಿಯೋಲೆ ತೂಕ ಮಾಡಿರುತ್ತೇನೆ. ಆಗ ಎರಡು ಚಿನ್ನದ ಉಂಗುರ 20 ಗ್ರಾಮ್, ಬ್ರೆಸ್ ಲೇಟ್ 19 ಗ್ರಾಮ್ ಮತ್ತು ಕಿವಿಯೋಲೆ 8.600 ಗ್ರಾಮ್ ತೂಕ ಬಂತು. ನಂತರ ತಾನು ವಾಪಸ್ಸು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-13 : ಫ್ರಾಸಾ-5 ದಿನೇಶ ರವರು ತಮ್ಮ ಸಾಕ್ಷ್ಯದಲ್ಲಿ , ದಿಃ 13.11.2021 ರಂದು ಚಾಸಾ -9 ರವರು ತನ್ನನ್ನು, ಚಾಸಾ -7 ಮತ್ತು ಚಾಸಾ -8 ರವರನ್ನು ಈ ಕೇಸಿಗೆ ಸಂಬಂಧಿಸಿದಂತೆ ಬಂಗಾರ ಮತ್ತು ಆರೋಪಿಗಳಾದ ನಿಮ್ಮನ್ನು ಪತ್ತೆ ಮಾಡಲು ಅವರ ಜೊತೆ ತಮ್ಮನ್ನು ಕರೆದುಕೊಂಡು ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-14 : ಫ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಹಾಗೆ ತಾವು ಹೂವಿನ ಚೌಕದ ಬಳಿ ಹೋದಾಗ ಆರೋಪಿಯಾದ ನೀವು ಅನುಮಾಸ್ಪದವಾಗಿ ತಿರುಗಾಡುತ್ತಿದ್ದೀರಿ. ನಂತರ ಅವರು ನಿಮ್ಮನ್ನು ಹಿಡಿದು ಠಾಣೆಗೆ ಕರೆದುಕೊಂಡು ಹೋದರು. ನಿಮಗೆ ಚಾಸಾ -9 ರವರು ದಂಡಪ್ರಕ್ರಿಯೆ ಸಂಹಿತೆ ಕಲಂ 41 ರಂತೆ ನೊಟೀಸು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-15 : ಫ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಆರೋಪಿಯಾದ ನಿಮ್ಮನ್ನು ಚಾಸಾ-9 ರವರು ವಿಚಾರಿಸಿದಾಗ ದಿಃ 13.11.2021 ರಂದು ಬೆಳಿಗ್ಗೆ 2.00 ಗಂಟೆಯ ಸಮಯದಲ್ಲಿ ಸಲ್ಮಾನ್ ಬಾದ್‌ನ ಫೋರ್ ಸೀಜನ್ ಹೊಟೇಲಿನ ಹಿಂಬದಿ ಇರುವ ಚಾಸಾ -1 ರವರ ಮನೆಯಲ್ಲಿ ಕಳ್ಳತನ ಮಾಡಿದ ಬಗ್ಗೆ ನೀವು ಹೇಳಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-16 : ಫ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಹಾಗೆ ನೀವು ನಿಮ್ಮ ಪ್ಯಾಂಟೀನ ಕಿಸೆಯಲ್ಲಿಟ್ಟುಕೊಂಡಿದ್ದ ಬಂಗಾರದ ಎರಡು ಚಿನ್ನದ ಉಂಗುರ, ಒಂದು ಚಿನ್ನದ ಬ್ರೆಸ್ ಲೇಟ್, ಒಂದು ಜೊತೆ ಚಿನ್ನದ ಕಿವಿಯೋಲೆಯನ್ನು ತೋರಿಸಿರುತ್ತೀರಿ. ಅವುಗಳ ಅಂದಾಜು ಒಟ್ಟು ತೂಕ 63 ಗ್ರಾಮ್ ಇತ್ತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-17 : ಫ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಹಾಗೆ ಆರೋಪಿಯಾದ ನೀವು ಕಳ್ಳತನ ಮಾಡಿದ ಮನೆಯನ್ನು ನಿಮ್ಮ ಜೊತೆ ಬಂದರೆ ತೋರಿಸುತ್ತೇನೆಂದು ಹೇಳಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-18 : ಫ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಪಂಚಸಾಕ್ಷಿಗಳ ಸಮಕ್ಷಮದಲ್ಲಿ ಈ ಮೇಲೆ ಹೇಳಿದ ಬಂಗಾರದ ಆಭರಣಗಳನ್ನು ಸಂಜೆ 4.45 ರಿಂದ 5.45 ಗಂಟೆಯವರೆಗೆ ಮಹಜರು ತಯಾರಿಸಿ ಜಪ್ತುಪಡಿಸಲಾಗಿರುತ್ತದೆ. ಅದೇ ದಿನ ಚಾಸಾ-1ರವರನ್ನು ಠಾಣೆಗೆ ಕರೆಯಿಸಿದ್ದು, ಸದರಿಯವರು ಬಂಗಾರಗಳನ್ನು ನೋಡಿ ಗುರುತಿಸಿ ಅದು ತನ್ನದೇ ಎಂದು ಹೇಳಿರುತ್ತಾರೆ. ಅದೇ ರೀತಿ ಚಾಸಾ -5ರವರು ಠಾಣೆಗೆ ಬಂದು ಬಂಗಾರವನ್ನು ಪರಿಶೀಲನೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-19 : ಫ್ರಾಸಾ-6 ಈರಣ್ಣ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 13.11.2021ರಂದು ಚಾಸಾ-1ರವರು ಹಾಗೂ ಚಾಸಾ-6, 8 ಹಾಗೂ ಅವರನ್ನು ಕರೆದುಕೊಂಡು ಭಟ್ಕಳದ ಹೂವಿನ ಚೌಕದ ಹತ್ತಿರ 4.00 ಗಂಟೆ ಸುಮಾರಿಗೆ ಸಂಶಯಾಸ್ಪದವಾಗಿ ಆರೋಪಿಯಾದ ನೀವು ಕಂಡುಬಂದಾಗ ನಿಮ್ಮನ್ನು ಪಿ ಎಸ ಐ ರವರು ವಶಕ್ಕೆ ತೆಗೆದುಕೊಂಡು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-20 : ಫ್ರಾಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ನಿಮ್ಮನ್ನು ಕೂಲಂಕೂಷವಾಗಿ ವಿಚಾರಣೆ ಮಾಡಿದಾಗ ಆರೋಪಿಯಾದ ನೀವು ದಿಃ 13.11.202ರಂದು ಭಟ್ಕಳದ ಸಲ್ಮಾನಬಾದ ರೈಸ್ ಮಿಲ್ ಹಿಂದುಗಡೆ

ಪಿರ್ಯಾದಿದಾರರ ಮನೆಯಲ್ಲಿ ಕಳ್ಳತನ ಮಾಡಿದ್ದು ಒಪ್ಪಿಕೊಂಡಿದ್ದು ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಮುಖ್ಯ ರಸ್ತೆಯ ಮಾರ್ಕೇಟಿನಲ್ಲಿ ವ್ಯಾಪಾರ ಮಾಡಲು ಬಂದಿದ್ದನ್ನು ಜೇಬಿನಿಂದ ತೆಗೆದು ತೋರಿಸಿರುತ್ತೀರಿ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-21 : ಫ್ರಾಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ನಂತರ ಪಿಎಸ್ ಐ ರವರು ಪಿರ್ಯಾದುದಾರರಿಗೆ ಠಾಣೆಗೆ ಬರಮಾಡಿಕೊಂಡು ಸದರಿ ಆಭರಣಗಳನ್ನು ಅವರಿಗೆ ತೋರಿಸಿದಾಗ ಅವರು ಗುರುತಿಸಿರುತ್ತಾರೆ. ತದನಂತರ ಎರಡು ಜನ ಪಂಚರನ್ನು ಹಾಗೂ ಅಕ್ಕಸಾಲಿಗರನ್ನು ಠಾಣೆಗೆ ಬರಮಾಡಿಕೊಂಡು ಬಂಗಾರದ ಆಭರಣಗಳನ್ನು ಪರಿಶೀಲಿಸಿದಾಗ 20 ಗ್ರಾಮ 2 ಉಂಗುರ, 19 ಗ್ರಾಮದ ಬ್ರೆಸ್ಲೇಟ್ ಹಾಗೂ 8 ಗ್ರಾಮದ ಕಿವಿಯೋಲೆಗಳನ್ನು ಚಾಸಾ-1 ರವರು ವಶಕ್ಕೆ ಪಡೆದುಕೊಂಡಿರುತ್ತಾರೆ. ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ ಬಾಗಿಲನ್ನು ಮುರಿದು ಕಳ್ಳತನ ಮಾಡಿರುತ್ತೀರಿ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-22 : ಫ್ರಾಸಾ-7 ಸುಮಾ ಬಿ. ರವರು ತಮ್ಮ ಸಾಕ್ಷ್ಯದಲ್ಲಿ, ದಿಃ13.11.2022 ರಂದು ಅವರು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ - 1 ರವರು ನೀಡಿದ ದೂರನ್ನು ಸ್ವೀಕರಿಸಿ ಗುನ್ನಾ ನಂಬರ್ 145 /2021 ನ್ನು ದಾಖಲಿಸಿ ಪ್ರ. ವ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ಬೆರಳಚ್ಚು ತಜ್ಞರ ಮತ್ತು ಶ್ವಾನದಳದ ತಜ್ಞರನ್ನು ಬರಮಾಡಿಕೊಂಡು ಚಾಸಾ 2- 3 ರವರ ಸಮಕ್ಷಮ ಮಹಜರನ್ನು ಜರುಗಿಸಿರುತ್ತಾರೆ. ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ಘಟನಾ ಸ್ಥಳದ ಮಹಜರನ್ನು ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-23 : ಫ್ರಾಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಅದೇ ದಿನ ಚಾಸಾ - 6, 7, 8 ರವರೊಂದಿಗೆ ಆರೋಪಿಯಾದ ನಿಮ್ಮ ಪತ್ತೆ ಕಾರ್ಯದಲ್ಲಿದ್ದಾಗ ನಿಮ್ಮನ್ನು ಹೂವಿನ ಚೌಕದ ಬಳಿ ವಶಕ್ಕೆ ಪಡೆದು ವಿಚಾರಿಸಿದಾಗ ನೀವು ನಿಮ್ಮ ತಪ್ಪನ್ನು ಒಪ್ಪಿಕೊಂಡ ನಂತರ ನಿಮಗೆ ನೋಟೀಸನ್ನು ಜಾರಿ ಮಾಡಿರುತ್ತಾರೆ.

ದಸ್ತಗಿರಿ ನಿಯಮ ಪಾಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-24 : ಫ್ರಾಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ನೀವು ತಿಳಿಸಿದಂತೆ ನಿಮ್ಮ ಬಳಿ ಇರುವ ಸ್ವತ್ತನ್ನು ಚಾಸಾ -1 ರವರು ಗುರುತಿಸಿದ್ದು ಚಾಸಾ -2 ಮತ್ತು 3 ಪಂಚಸಾಕ್ಷಿಗಳ ಸಮಕ್ಷಮ ಚಾಸಾ -5 ರವರು ಸ್ವತ್ತನ್ನು ಪರಿಶೀಲಿಸಿದ ನಂತರ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-25 : ಫ್ರಾಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ನಿಮ್ಮ ಬಳಿ ಇದ್ದ 2 ಉಂಗುರ ಅದರ ಅಂದಾಜು ಮೌಲ್ಯ 60,000 , 20.540 ಗ್ರಾಮ ಹಾಗೂ ಒಂದು ಬ್ರೆಸ್ ಲೆಟ್ ಅದರ ಮೌಲ್ಯ 50,000 ಮತ್ತು ಕಿವಿಯೋಲೆಯನ್ನು ಪಿಎಫ್ ನಂಬರ 71/21 ನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ ಚಿನ್ನದ ಮಹಜರನ್ನು ಅಕ್ಕಸಾಲಿಗರನ್ನು ಕರೆಯಿಸಿ ಪಂಚರ ಸಮಕ್ಷಮ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-26 : ಫ್ರಾಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಆರೋಪಿಯಾದ ನಿಮ್ಮ ಸ್ವಖುಷಿ ಹೇಳಿಕೆಯನ್ನು ಪಡೆದಿರುತ್ತಾರೆ. ನೀವು ತೋರಿಸಿದ ರಾಡನ್ನು ಜಪ್ತಿ ಮಾಡಿರುತ್ತಾರೆ ಮತ್ತು ನೀವು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿರುತ್ತಾರೆ. ಪಂಚರ ಸಮಕ್ಷಮ ಜಪ್ತು ಪಂಚನಾಮೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-27 : ಫ್ರಾಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, 65 ಬಿ ಕಲಂ ರಡಿಯಲ್ಲಿ ಪ್ರಮಾಣಪತ್ರವನ್ನು ಪಡೆದಿರುತ್ತಾರೆ. ನ್ಯಾಯಾಲಯದ ಆದೇಶದಂತೆ ಚಿನ್ನವನ್ನು ಪಿರ್ಯಾದಿದಾರರಿಗೆ ಒಪ್ಪಿಸಿರುತ್ತಾರೆ. ದಿಃ10.04.2022 ರಂದು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-28 : ಫ್ರಾಸಾ-8 ಮೊಹಮ್ಮದ್ ಕುರಾನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13.11.2021 ರಂದು ತಮ್ಮ ಪಕ್ಕದ ಮನೆಯಲ್ಲಿ ಕಳ್ಳತವಾಗಿರುತ್ತದೆ ಅದರೆ ಬಾಬ್ತು 11.30 ಕ್ಕೆ ತನಗೆ ಘಟನಾ ಸ್ಥಳಕ್ಕೆ ಕರೆದು ಶ್ವಾನದಳ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ನಂತರ ಸಂಜೆ ಪೊಲೀಸರು ತನಗೆ ಕರೆ ಮಾಡಿ ಠಾಣೆಗೆ ಕರೆಸಿದ್ದರು. ತನ್ನ ಸಮಕ್ಷಮ ಪೊಲೀಸರು ಸ್ಥಳ ಮತ್ತು ಜಪ್ತುಪಂಚನಾಮೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-29 : ಫ್ರಾಸಾ-9 ಲೋಕಪ್ಪ ರವರು ತಮ್ಮ ಸಾಕ್ಷ್ಯದಲ್ಲಿ , ಭಟ್ಕಳ ಶಹರ ಪೊಲೀಸ್ ಠಾಣೆಯ ಗುನ್ನಾ ನಂಬರ್ 145/2021 ನೇದರಲ್ಲಿ ಚಾಸಾ -9 ರವರ ಆದೇಶದಂತೆ ಪಂಚನಾಮೆ ಸಮಯದಲ್ಲಿ ವಿಡಿಯೋ ಗ್ರಾಪಿ ಮತ್ತು ಪೊಟೋ ತೆಗೆದು ಚಾಸಾ -9 ರವರಿಗೆ ಹಾಜರುಪಡಿಸಿರುತ್ತಾರೆ. ಕಲಂ 65 ಬಿ ರಂತೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರ :False

ಪ್ರಶ್ನೆ-30 : ಈ ಮೊಕದ್ದಮೆಯಲ್ಲಿ ನೀವು ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರ : No

ಪ್ರಶ್ನೆ-31 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಅಥವಾ ಹಾಜರುಪಡಿಸಲು ದಾಖಲೆಗಳು ಏನಾದರೂ ಇದೆಯಾ?

ಉತ್ತರ : No

(ಸಾಕ್ಷಿದಾರರ ಸಾಕ್ಷ್ಯವನ್ನು ಸಂಕ್ಷಿಪ್ತಗೊಳಿಸಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಸದ್ರಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಲಾಗಿದೆ.)

Sd/-

**(ಶ್ರೀಮತಿ. ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 22-08-2024 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.